ಎನ್ನಲಾಗಿದೆ. ಅತ್ಯಂತ ನೈಜವಾಗಿರುವ ಇದರ ಕೆಂಪು–ಗುಲಾಬಿ ಮಿಶ್ರಿತ ಬಣ್ಣ ಕ್ರೋಮಿಯಂ ಘಟಕದ ಅಸ್ತಿತ್ವದಿಂದ ಉಂಟಾಗುತ್ತದೆ. ಇದರ ಬೆಲೆ ನಿಗದಿಯಾಗುವುದು ರೂಬಿಯ ಬಣ್ಣಗಳಿಂದ. ವಿವಿಧ ಆಕಾರ, ಕಟ್ ಮತ್ತು ತೂಕದಿಂದಲೂ ಇದರ ಬೆಲೆಯನ್ನು ನಿರ್ಧರಿಸಲಾಗುತ್ತದೆ ಎನ್ನುತ್ತಾರೆ ವರ್ತಕರು. ಅಲ್ಲದೆ ವಜ್ರದ ಶುದ್ಧದ ಮಾನದಂಡವನ್ನು ಕಂಡುಹಿಡಿಯಲು ಉಪಯೋಗಿಸುವ ನಾಲ್ಕು ಸಿ (ಕಟಿಂಗ್, ಕಲರ್, ಕ್ಯಾರಟ್, ಕ್ಲ್ಯಾರಿಟಿ)ಯನ್ನೇ ಬಳಸಿ ರೂಬಿಯ ಪಾವಿತ್ರ್ಯವನ್ನೂ ಅಳೆಯಲಾಗುತ್ತದೆ. ರೂಬಿಯ ಗಾತ್ರ ಮತ್ತು ಭೌಗೋಳಿಕ ಮೂಲವನ್ನೂ ಪತ್ತೆಹಚ್ಚಿ ಇದರ ಮೌಲ್ಯಮಾಪನವನ್ನು ಮಾಡಲಾಗುತ್ತದೆ.

### ದೈವತ್ವದ ಕಳೆ

ಸಾಂಪ್ರದಾಯಿಕ ಒಡವೆ, ಟೆಂಪಲ್ ಆಭರಣ, ಹೆರಿಟೇಜ್ ಒಡವೆಗಳಲ್ಲಿ ರೂಬಿ ಹರಳನ್ನು ಅಳವಡಿಸಿ ಧರಿಸಿದರೆ ಒಂದು ರೀತಿಯ ದೈವತ್ವದ ಕಳೆ ಬರುತ್ತದೆ. ಗಾಢಬಣ್ಣದ ರೇಷ್ಮೆ ಸೀರೆಗೆ ಕಾಂಟ್ರಾಸ್ಟ್ ಅಥವಾ ಮ್ಯಾಚಿಂಗ್ ಬಣ್ಣದ ರವಿಕೆ ತೊಟ್ಟರೆ ಮದುವೆ ಮನೆಯಲ್ಲಿ ಆಕೆಯ ಮೇಲೇ ಎಲ್ಲರ ಕಣ್ಣು. ಈ ಸೊಬಗನ್ನು ಇನ್ನಷ್ಟು ಇಮ್ಮಡಿಸುವುದು ಹೊನ್ನಿನ ಒಡವೆ ತೊಟ್ಟಾಗ. ಅದು ಮಿರಿಮಿರಿ ಮಿಂಚುವ ಹರಳಿನ ಆಭರಣ ತೊಟ್ಟರೆ ಹೆಣ್ಣು ಮತ್ತಷ್ಟು ಅಂದವಾಗಿ ಕಾಣುತ್ತಾಳೆ. ಹರಳುಗಳಲ್ಲಿ ಅದರಲ್ಲೂ ಕಣ್ಮನ ಸೆಳೆಯುವ ಬಣ್ಣದ ರೂಬಿ ಒಡವೆ ತೊಟ್ಟರಂತೂ ಆಕೆಯ ನೋಟ ಮತ್ತಷ್ಟು ಆಕರ್ಷಕವಾಗುವುದರಲ್ಲಿ ಸಂಶಯವೇ ಇಲ್ಲ. ಯಾವುದೇ ಉಡುಗೆ ತೊಟ್ಟಿರಲಿ, ರೂಬಿಯ ಒಡವೆ ಧರಿಸಿದರೆ ಎಲ್ಲದಕ್ಕೂ ಸಖತ್ ಆಗಿ ಒಗ್ಗಿಕೊಳ್ಳುತ್ತದೆ. ಪಾರಂಪರಿಕ ಉಡುಗೆಗೆ ಅಷ್ಟೇ ಪಾರಂಪರಿಕವಾದ ಚಿನ್ನದ ಒಡವೆಗಳೂ ಸೇರಿಕೊಂಡರೆ ಆ ಮಹಿಳೆಗೆ ದೈವತ್ವದ ಕಳೆ ಬರುತ್ತದೆ.



ಇದೀಗ ಪಾರಂಪರಿಕ ಆಭರಣವೂ ಫ್ಯಾಷನ್‌ನ ಹಾದಿ ಹಿಡಿದಿದೆ. ಸಾಂಪ್ರದಾಯಿಕ ಆಭರಣ, ಟೆಂಪಲ್ ಆಭರಣ ಫ್ಯಾಷನ್‌ಗೂ ಸೈ ಎನಿಸಿಕೊಂಡಿದೆ. ನವನವೀನ ವಿನ್ಯಾಸಗಳ ರೂಬಿ ಹರಳಿನ ಆಭರಣ ಕಂಡಾಗ ಮಹಿಳೆಗೆ ಅಪರಂಜಿಯಷ್ಟೇ ಖುಷಿಯಾಗುತ್ತದೆ.

ಹುಡುಗಿ ಚಿಕ್ಕವಳಿರುವಾಗಲೇ ಅಲಂಕಾರಕ್ಕೆ, ಒಡವೆ ವಿನ್ಯಾಸಗಳ ಬಗ್ಗೆ ಒಲವು ಬೆಳೆಸಿಕೊಂಡಿರುತ್ತಾಳೆ. ಇದು ಆಕೆಗೆ ಅಜ್ಜಿ–ಅಮ್ಮಂದಿರ ಬಳುವಳಿಯೂ ಆಗಿರಬಹುದು. ಚಂದದ ಕುಸುರಿ ಇರುವ ಆಭರಣವನ್ನು ಕೊಂಡುಕೊಳ್ಳಲು ತವಕಪಡುವ ಮಹಿಳೆಗೆ ಈ ಹೂಡಿಕೆ ಹಿಂದೆ ಚಿನ್ನ ಆಪತ್ಕಾಲದಲ್ಲಿ ನೆರವಾಗುತ್ತದೆ ಎಂಬ ಜಾಗೃತ ಮನಸ್ಸೂ ಇರಬೇಕು, ಮನಮೋಹಕವಾದ ಪಾರಂಪರಿಕ ಆಭರಣ ಫ್ಯಾಷನ್ ಆಗಿ ಬಂದ ಲಾಗಾಯ್ತಿನಿಂದಲೂ ಚಿನ್ನದ ಜತೆಗೆ ಅತ್ಯಾಕರ್ಷಕ ಕುಂದನ್, ಮಿನಾಕರಿ, ಟೆಂಪಲ್ ಜ್ಯುವೆಲ್ಲರಿ, ಇಟಾಲಿಯನ್ ಆಭರಣ, ಮುತ್ತು, ರೂಬಿ, ಹರಳು, ಪಚ್ಚೆ, ಹವಳಗಳು ತಳುಕು ಹಾಕಿಕೊಂಡು ಮತ್ತಷ್ಟು ಆಕರ್ಷಕವಾಗಿ ಗ್ರಾಹಕರನ್ನು ತಲುಪಿಸಲು ಆಭರಣ ಮಳಿಗೆಗಳು ಮುಂದಾಗಿವೆ. ಇದರ ಜತೆಗೆ ಪ್ರಾಚೀನ ಆಭರಣಗಳು, ವಧುವಿನ ಅಲಂಕಾರ ಸಂಗ್ರಹ, ನಿಜಾಮರ ಕಾಲದ ಒಡವೆಗಳು, ಹಗುರವಾದ ಆಭರಣ, ಟು–ಇನ್–ವನ್ ಒಡವೆ ಸಂಗ್ರಹ, ವಿಕ್ಟೋರಿಯನ್ ಆಭರಣ.. ಹೀಗೆ ಆಭರಣಗಳ ತರಾವರಿ ಸಂಗ್ರಹ ಫ್ಯಾಷನ್ ಜಗತ್ತಿನಲ್ಲಿ ರಾಯಭಾರ ನಡೆಸುತ್ತಿದೆ. ರೂಬಿ ಅಥವಾ ಮಾಣಿಕ್ಯದ ಒಡವೆಗಳು ಎಲ್ಲ ಒಡವೆಗಳಿಗೆ ಕಲಶವಿಟ್ಟಂತೆ ಕಾಣುತ್ತದೆ ಎಂಬುದು ಫ್ಯಾಷನ್ ತಜ್ಞರ ಅಭಿಮತ ಕೂಡ. ■



## ರೂಬಿ ಒಡವೆ ಸಂರಕ್ಷಣೆ ಹೇಗೆ?

- ರೂಬಿ ಹರಳಿನ ಒಡವೆ ಖರೀದಿಸುವಾಗ ಕಲ್ಲುಗಳ ನೈಜತೆ ಬಗ್ಗೆ ಗಮನವಿರಲಿ.
- ರೂಬಿ ಹರಳುಗಳನ್ನು ಪ್ರತ್ಯೇಕವಾಗಿ ಖರೀದಿಸಿ ತೆಗೆದಿರಿಸಿಕೊಳ್ಳಿ. ಚಿನ್ನದ ಆಭರಣ ಮಾಡಿಸಬೇಕೆಂದಾಗ ರೂಬಿ ಸೇರಿಸಿ ವಿಭಿನ್ನವಾಗಿ ಒಡವೆ ಮಾಡಿಸಿಕೊಳ್ಳಿ. ಆಗ ನಮಗೆ ಬೇಕಾದ ವಿನ್ಯಾಸದ, ಮನಸ್ಸಿಗೊಪ್ಪುವ ಒಡವೆಯನ್ನು ಪಡೆಯಲು ಸಾಧ್ಯ.
- ಕೆಲವೊಮ್ಮೆ ಜ್ಯುವೆಲ್ಲರಿ ಪ್ರದರ್ಶನ ಮತ್ತು ಮಾರಾಟ ಮೇಳಗಳಲ್ಲಿ ರೂಬಿ ಹರಳುಗಳು ಸಿಗುತ್ತವೆ. ಹಾಗೆ ಸಿಕ್ಕಿದಾಗ ಖರೀದಿಸಿಟ್ಟುಕೊಳ್ಳುವುದು ಒಳ್ಳೆಯದು.
- ರೂಬಿ ಇರಲಿ, ಯಾವುದೇ ಹರಳುಗಳ ಒಡವೆ ಇರಲಿ, ಎಲ್ಲವನ್ನು ಪ್ರತ್ಯೇಕವಾಗಿಯೇ ಇಡಿ. ಇತರ ಆಭರಣಗಳ ಜೊತೆಗೆ ಇಟ್ಟರೆ ಹರಳು ಅಂದಗೆಡುವ ಸಾಧ್ಯತೆ ಇದೆ.
- ರೂಬಿ ಹರಳಿನಾಭರಣಕ್ಕೆ ಬಿಸಿನೀರು, ಇತರೇ ಶಾಖ ತಾಗದಂತೆ ಜಾಗ್ರತೆ ವಹಿಸಿ. ಅದೇ ರೀತಿ ಧೂಳು, ಎಣ್ಣೆ ಹಾಗೂ ಜಿಡ್ಡಿನಾಂಶ ತಾಗದಂತೆ ಎಚ್ಚರ ವಹಿಸಿ. ಇಲ್ಲದಿದ್ದರೆ ರೂಬಿ ಹರಳು ಹೊಳಪು ಕಳೆದುಕೊಳ್ಳುವ ಸಾಧ್ಯತೆ ಇದೆ.
- ಹರಳಿನಾಭರಣದಲ್ಲಿ ಕೊಳೆ ಕೂರದಂತೆ ಎಚ್ಚರವಹಿಸಿ. ಕೊಳೆ, ಧೂಳು ತುಂಬಿದ್ದರೆ ಅದನ್ನು ಅಂಟುವಾಳ ಕಾಯಿ ಅಥವಾ ಸೋಪು ಹಾಕಿ ಬ್ರಷ್‌ನಿಂದ ನಯವಾಗಿ ಉಜ್ಜಿ ತೊಳೆದು ಶುಭ್ರವಾದ ಬಟ್ಟೆಯಲ್ಲಿ ಒರೆಸಿ ತೆಗೆದಿಡಿ.